**ದಿನಾಂಕಃ 23.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ ಶ್ರೀ. ಬಿ.ಎಮ್.ಎನ್ ವಕೀಲರಿಂದಃ**

ನಾನು 3 ನೇ ತರಗತಿಯ ವರೆಗು ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಆದರೆ ಸಹಿ ಮಾಡುತ್ತೇನೆ. ನಾನು ಸಿಸಿ ಸಂಖ್ಯೆ 428/2013 ರಲ್ಲಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಸಾಕ್ಷಿದಾರರಿಗೆ ಸಿಸಿ ಸಂಖ್ಯೆ 428/2013 ರ ಸಾಕ್ಷ್ಯ ವಿಚಾರಣೆ ಮತ್ತು ಪಾಟೀ ಸವಾಲಿನ ದೃಢೀಕೃತ ನಕಲನ್ನು ತೋರಿಸಲಾಗಿ, ಸಾಕ್ಷಿದಾರರು ಒಪ್ಪಿಕೊಂಡಿದ್ದರಿಂದ ನಿಡಿ-9 ಎಂದು ಗುರುತಿಸಲಾಯಿತು. ನಾನು ಈ ದಾವೆಯನ್ನು ಸರ್ವೆ ನಂಬರ್ 151/1 ರ 1 ಎಕರೆ 11 ಗುಂಟೆಗಾಗಿ ಮತ್ತು ಸರ್ವೆ ನಂಬರ್ 151/2 ರ 1 ಎಕರೆ 13 ಗುಂಟೆ ಜಮೀನಿಗಾಗಿ, ಮತ್ತು ಸರ್ವೆ ನಂಬರ್ 151/3(ಎ)ರ 23 ಗುಂಟೆ ಜಮೀನಿಗಾಗಿ ಸಲ್ಲಿಸಿರುತ್ತೇನೆ. ನಾನು ಈ ದಾವೆಯನ್ನು ಮೇಲೆ ತಿಳಿಸಿದ ಮೂರು ಆಸ್ತಿಗಳಿಗಾಗಿ ಸಲ್ಲಿಸಿರುತ್ತೇನೆ. ಸದರಿ ಆಸ್ತಿಗಳು ನನ್ನ ತಂದೆ ಮಾದಯ್ಯ ರವರಿಗೆ ಸೇರಿರುತ್ತವೆ. ಸದರಿ ಆಸ್ತಿಗಳನ್ನು ನನ್ನ ತಂದೆಯಾದ ಮಾದಯ್ಯ ರವರು ದಿನಾಂಕ 03.03.1922 ರಂದು ಕ್ರಯ ಪತ್ರದ ಮೂಲಕ ಸಣ್ಣಮ್ಮ ಕೋಂ ಮಾದ ಯಾನೇ ಗುಡ್ಡ ರವರಿಂದ ಖರೀದಿಸಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ನಾನು ಮೇಲೆ ತಿಳಿಸಿದ ಮೂರು ಸರ್ವೆ ನಂಬರ್ ಆಸ್ತಿಗಳು ನಮೂದಾಗಿರುತ್ತವೆ. ಸದರಿ ಕ್ರಯ ಪತ್ರವು ಉಪನೊಂಧಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿಯಾಗಿರುತ್ತದೆ.

ನಾನು ಸಲ್ಲಿಸಿರುವ ನಿಪಿ-1 ರ ದಾಖಲಾತಿಯು ನೊಂದಣಿ ಆಗಿಲ್ಲ ಎಂದರೆ ಸರಿ. ಸದರಿ ನಿಪಿ-1 ರ ದಾಖಲಾತಿಗೆ ಯಾರು ಯಾರು ಸಹಿ ಮಾಡಿದ್ದಾರೆ ಮತ್ತು ಯಾರು ಯಾರು ಹೆಬ್ಬೆಟ್ಟು ಗುರುತು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ-1 ರ ದಾಖಲಾತಿಯನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ-1 ರ ಪತ್ರವನ್ನು ಯಾರು ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ದಾಖಲಾತಿಯನ್ನು ಈ ದಾವೆಗಾಗಿ ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆಗೆ ಮೂರು ಜನ ಮಕ್ಕಳು ಇದ್ದರು ಅವರಲ್ಲಿ ನನ್ನ ಸಹೋದರಿ ಜಯಮ್ಮ ರವರು ಮರಣ ಹೊಂದಿರುತ್ತಾರೆ. ಇನ್ನುಳಿದಂತೆ ನಾನು ಮತ್ತು ಮರಿಸ್ವಾಮಿ ರವರು ಜೀವಂತವಿರುತ್ತೇವೆ. ಪುಟ್ಟನಂಜಮ್ಮ ರವರು ನಮ್ಮ ತಾಯಿ. ನಾನು ಮತ್ತು ನನ್ನ ಸಹೋದರ ಮರಿಸ್ವಾಮಿ ರವರು ಬೇರೆ

ಬೇರೆಯಾಗಿ ವಾಸಿಸುತ್ತಿದ್ದೇವೆ. ನಾನು ಮತ್ತು ನನ್ನ ಸಹೋದರ ನಮ್ಮ ಕುಟುಂಬದ ಆಸ್ತಿಗಳನ್ನು ಇನ್ನು ಭಾಗ ಮಾಡಿಕೊಂಡಿರುವುದಿಲ್ಲ. ನಮ್ಮ ತಂದೆಯ ತಂದೆಯ ಅಂದರೆ ನಮ್ಮ ತಾತನ ಹೆಸರು ಭೀಮಯ್ಯ. ನನ್ನ ತಂದೆಯು ದಿನಾಂಕ 02.01.2015 ರಲ್ಲಿ ಮರಣ ಹೊಂದಿರುತ್ತಾರೆ. ಸಿಸಿ ಸಂಖ್ಯೆ 428/2013 ದಾಖಲಾದ ಸಮಯದಲ್ಲಿ ನನ್ನ ತಂದೆ ಬದುಕಿದ್ದರು. ಸದರಿ ಸಿಸಿ 428/2013 ರಲ್ಲಿ ನನ್ನ ತಂದೆಯು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಿಸಿ 428/2013 ರಲ್ಲಿ ನನ್ನ ತಂದೆ ಮಾದಯ್ಯ ರವರು ಸಾಕ್ಷ್ಯ ನುಡಿದಿಲ್ಲ ಎಂದರೆ ಸರಿಯಲ್ಲ.

4 ಮತ್ತು 5 ನೇ ಪ್ರತಿವಾದಿಗಳು ಹ್ಯಾಕನೂರು ಗ್ರಾಮದವರು. 1 ಮತ್ತು 2 ನೇ ಪ್ರತಿವಾದಿಯವರು ಮರಣ ಹೊಂದಿರುತ್ತಾರೆ. ನಾನು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ 1 ಮತ್ತು 2 ನೇ ಪ್ರತಿವಾದಿಯವರು ಮರಣ ಹೊಂದಿದ ಬಗ್ಗೆ ನನಗೆ ಗೊತ್ತಿತ್ತು. ಸದರಿ 1 ಮತ್ತು 2 ನೇ ಪ್ರತಿವಾದಿಯವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸತ್ತ ವ್ಯಕ್ತಿಗಳ ವಿರುದ್ಧ ನಾನು ಈ ದಾವೆ ಸಲ್ಲಿಸಿರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಹ್ಯಾಕನೂರು ಗ್ರಾಮದ ಸರ್ವೆ ನಂಬರ್ 148/2 ರ ಜಮೀನಿಗೆ ನಾನು ಈ ದಾವೆ ಸಲ್ಲಿಸಿರುವುದಿಲ್ಲ.

ಸರ್ವೆ ನಂಬರ್ 151/1, 151/2, ಮತ್ತು 151/3(ಎ) ರ ಜಮೀನುಗಳ ಖಾತೆಯು ನಮ್ಮ ತಂದೆಯ ಹೆಸರಿನಲ್ಲಿ ಇರುವುದಕ್ಕೆ ನಾನು ದಾಖಲಾತಿಗಳನ್ನು ನೀಡಿರುತ್ತೇನೆ. ನಾನು ಸಲ್ಲಿಸಿರುವ ದಾಖಲಾತಿಗಳಲ್ಲಿ ಸದರಿ ಜಮೀನುಗಳ ಖಾತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ತಹಶೀಲ್ದಾರ, ತಿ. ನರಸೀಪುರ, ಉಪವಿಭಾಗಾಧಿಕಾರಿ, ಮೈಸೂರು ಮತ್ತು ಜಿಲ್ಲಾಧಿಕಾರಿಗಳು, ಮೈಸೂರು ರವರಿಗೆ ನೀಡಿದ್ದ ಅರ್ಜಿಗಳಲ್ಲಿ ಸರ್ವೆ ನಂಬರ್ 151/2 ರ 1 ಎಕರೆ 13 ಗುಂಟೆ ಜಮೀನು ಮಾತ್ರ ನನಗೆ ಸಂಬಂಧಿಸಿದ್ದು ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಸದರಿ ಅರ್ಜಿಗಳಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ನಮೂದಿಸಿದ್ದೇನೆ ಎಂದರೆ ಸರಿ.

ನಮ್ಮ ತಾತ ಭೀಮಯ್ಯ ರವರಿಗೆ ಮಾದಯ್ಯ, ಪುಟ್ಟರಂಗಯ್ಯ, ಚಿಕ್ಕಮಾದಯ್ಯ, ಮತ್ತು ಪುಟ್ಟಸ್ವಾಮಯ್ಯ ಎಂಬ ನಾಲ್ಕು ಜನ ಮಕ್ಕಳು. ಸದರಿಯವರು ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಸರ್ವೆ ನಂಬರ್ 151/1 ರ ಜಮೀನಿಗೆ ಚೆಕ್ಕುಬಂದಿ ಪೂರ್ವಕ್ಕೆ ಮಾದಯ್ಯ ರವರ ಜಮೀನು, ಪಶ್ಚಿಮಕ್ಕೆ ಮಲ್ಲೇಗೌಡ ರವರ ಜಮೀನು, ಉತ್ತರಕ್ಕೆ ಪಿಳ್ಳೆಕರ್ಗಯ್ಯ ರವರ ಜಮೀನು, ದಕ್ಷಿಣಕ್ಕೆ ಮಾದಯ್ಯ ಭೀಮಯ್ಯ ರವರ ಜಮೀನು ಬರುತ್ತದೆ. ಪ್ರತಿವಾದಿಗಳು ಈ

ದಾವೆಯಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ನಿಡಿ-2 ರ ಪ್ರಕಾರ ಸರ್ವೆ ನಂಬರ್ 151/2 ರ ಪಹಣಿ ಪತ್ರಿಕೆಯಲ್ಲಿ ಬಸಪ್ಪ ರವರ ಹೆಸರು ದಾಖಲು ಆಗಿದೆ ಎಂದರೆ ಸರಿ. ನಿಡಿ-3 ರಲ್ಲಿ ಸರ್ವೆ ನಂಬರ್ 151/1, 151/2, 151/3, ಮತ್ತು 151/4 ಎಂದು ನಮೂದು ಆಗಿದೆ ಎಂದರೆ ಸರಿ. ನಿಡಿ-3 ರಲ್ಲಿ ಬಸಪ್ಪ ಬಿನ್ ನಂಜಪ್ಪ ಎಂದು ನಮೂದು ಆಗಿದೆ ಎಂದರೆ ಸರಿ. ಸದರಿ ನಿಡಿ-3 ರಲ್ಲಿ ರೆವಿನ್ಯೂ ಸೇಲ್ ಮೂಲಕ ಬಸಪ್ಪ ಬಿನ್ ನಂಜಪ್ಪ ರವರಿಗೆ ಖಾತೆ ದಾಖಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನಾನು ಮೇಲೆ ತಿಳಿಸಿದ ಆಸ್ತಿಗಳ ಹಳೆಯ ಪಹಣಿ ಪತ್ರಿಕೆಗಳನ್ನು ತೆಗೆಸಿ ಪರಿಶೀಲಿಸಿರುತ್ತೇನೆ. ಸದರಿ ಹಳೆಯ ಪಹಣಿ ಪತ್ರಿಕೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ದಾಖಲಾತಿಗಳನ್ನು ಸಲ್ಲಿಸಲು ನನಗೆ ತೊಂದರೆ ಇರುವುದಿಲ್ಲ. ನಿಡಿ-6 ರಲ್ಲಿ ಬಸಪ್ಪ ಬಿನ್ ನಂಜಪ್ಪ ಎಂದು ನಮೂದು ಆಗಿದೆ ಎಂದರೆ ಸರಿ. ನಿಡಿ-1 ರಲ್ಲಿ ಬಸಪ್ಪ ಬಿನ್ ನಂಜಪ್ಪ ರವರಿಗೆ ಸ್ಥಿರ ಸ್ವತ್ತಿನ ಹರಾಜು ಮೂಲಕ ಐದು ಎಕರೆ ಜಮೀನು ಬಂದಿದೆ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ಸದರಿ ಹರಾಜು ಸರ್ಟಿಫಿಕೇಟನ್ನು ನಾನು ಹುಡುಕಿ ಪಡೆದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.

ಸದರಿ ಬಸಪ್ಪ ರವರ ಹೆಸರಿನಲ್ಲಿ ದಾಖಲಾಗಿದ್ದ ಖಾತೆಯನ್ನು ರದ್ದತಿ ಕೋರಿ ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಬಸಪ್ಪ, ನಾಗಮ್ಮ, ಮಲ್ಲಿಕಾರ್ಜುನ ರವರು ಲಿಂಗಾಯತ ವರ್ಗಕ್ಕೆ ಸೇರಿದವರು. ನಾನು ಪರಿಶಿಷ್ಟ ಜಾತಿಗೆ ಸೇರಿರುತ್ತೇನೆ. ನಮ್ಮ ತಂದೆಗೆ ಇಷ್ಟು ಜನ ಮಕ್ಕಳು ಎಂದು ತೋರಿಸಲು ನಾನು ತಹಶೀಲ್ದಾರ ರವರಿಂದ ಪಡೆದುಕೊಂಡ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ನಾನು ಮಾದಯ್ಯ ರವರ ಮಗ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಕ್ರಯ ಪತ್ರವನ್ನು ರದ್ದು ಮಾಡಿ ಎಂದು ನಾನು ಈ ದಾವೆಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ನಮ್ಮ ಆಸ್ತಿಯನ್ನು ಬೇರೆಯವರ ಹೆಸರಿನಲ್ಲಿ ಮೋಸದಿಂದ ಮಾರಾಟ ಮಾಡಿದ್ದಾರೆ ಎಂದು ನಾನು ಈ ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-2 ರ ದಾಖಲಾತಿಯಲ್ಲಿ ನಾನು ಮೇಲೆ ತಿಳಿಸಿದ ಮೂರು ಸರ್ವೆ ನಂಬರ್ ಗಳ ಜಮೀನು ನಮೂದು ಆಗಿವೆ. ಸದರಿ ನಿಪಿ-2 ರ ಕ್ರಯ ಪತ್ರವನ್ನು ಪ್ರಶ್ನಿಸುವ ಯಾವುದೇ ಅಧಿಕಾರ ಮತ್ತು ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಅನುಸೂಚಿ ಸ್ವತ್ತಿನ ಮೇಲೆ ನನಗಾಗಲೀ ಅಥವಾ ನನ್ನ ತಂದೆಗಾಗಲೀ ಅಥವಾ ನನ್ನ ಸಹೋದರನಿಗಾಗಲೀ ಯಾವುದೇ ಹಕ್ಕು,

ಹಿತಾಸಕ್ತಿ ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ನಿಪಿ-2ರ ಕ್ರಯ ಪತ್ರಕ್ಕು ಈ ದಾವಾ ಅನುಸೂಚಿ ಸ್ವತ್ತಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ